ವರದಿಗಳನ್ನೊಪ್ಪಿಸುವುದು

ಶ್ರೀ. ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) (ಸದಸ್ಯರು, ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ) ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೆ ವರದಿಯನ್ನು ಈ ಸಭೆಯಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನು ಒಪ್ಪಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲಕರವರು ನೀಡಿರುವ ಕರ್ನಾಟಕ ಸರ್ಕಾರದ 1999ನೇ ಸಾಲಿನ ಮಾರ್ಚ್ 31ರ ಅಂತ್ಯದವರೆಗೆ (ರಾಜ್ಯಸ್ವ ಸ್ವೀಕೃತ) (ಸಂಖ್ಯೆ 1) ಸಂಬಂಧಿಸಿದ ವರದಿಯನ್ನು ಈ ಸಭೆಯ ಮುಂದಿಡುತ್ತೇನೆ.

ಹಾಗೆಯೇ ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ 1998-99ನೇ ಸಾಲಿನ ಹಣಕಾಸು ಲೆಕ್ಕಪತ್ರಗಳು ಹಾಗೂ ಧನವಿನಿಯೋಗ ಲೆಕ್ಕಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಪ್ರಶ್ನೋತ್ತರದ ಉತ್ತರ ಪತ್ರಿಕೆಗಳಲ್ಲಿ ಸಂಬಂಧ ಪಟ್ಟ ಸಚಿವರ ಸಹಿ ಇಲ್ಲದಿರುವ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಒಂದು ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ. ಸದಸ್ಯರಾದ ಮಾನ್ಯ ರಾಮದಾಸ್‌ರವರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದರು. ಪ್ರಶ್ನೆಗಳೇನಿರುತ್ತದೆ ಅದಕ್ಕೆ ಉತ್ತರವನ್ನು ಕೊಟ್ಟಿರುತ್ತಾರೆ ಆದರೆ ಸಚಿವರು ಅದಕ್ಕೆ ಸಹಿ ಮಾಡಿರುವುದಿಲ್ಲ. ಆದ್ದರಿಂದ ಉತ್ತರವನ್ನು ಕೊಡಬೇಕಾದರೆ ಅದರ ಗಂಭೀರತೆಯ ಬಗ್ಗೆ ಅಧ್ಯಯನ ಮಾಡಿ ಉತ್ತರ ಕೊಡುತ್ತಾರೋ ಇಲ್ಲವೋ ಎಂಬ ಪ್ರಶ್ನೆ ಬರುತ್ತದೆ. ನಮಗೆ ಉತ್ತರವನ್ನು ಕಳಿಸುತ್ತಾರೆ ಆದಕ್ಕೆ ಅವರ ಅಧೀನ ಕಾರ್ಯದರ್ಶಿಯವರು, ಇತರೆ ಅಧಿಕಾರಿಗಳು ಸಹಿ ಮಾಡಿರುತ್ತಾರೆ.

ಅಧ್ಯಕ್ಷರು : ಮುಖ್ಯ ಕಡತಕ್ಕೆ ಸಚಿವರು ಸಹಿ ಮಾಡಿರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ತಾವು ಸದಸ್ಯರಿದ್ದಾಗ ಇದರ ಬಗ್ಗೆ ತಕರಾರು ಮಾಡಿದ್ದೀರಿ. ಅದರ ಬಗ್ಗೆ ಸ್ವಲ್ಪ ಈ ಸಭೆಯ ಗಮನಕ್ಕೆ ತರುತ್ತೇನೆ. 23.3.1990 ರಲ್ಲಿ ಇದು ಆಗಿರುವುದು. ಅದನ್ನು ಓದಿಬಿಡುತ್ತೇನೆ.